ಪಾತಾಳ ಮೊದಲಾದ ಲೋಕವ ಪ್ರಳಯದಿ ವಾತಸಖನಿಂದಲಿ ಸುಡಿಸಿ ।
ಭೂತಪಂಚಕ ಮೊದಲಾದ ತತ್ವಂಗಳ ಶ್ರೀನಾಥ ಸಂಹರಿಸಿದಾಕ್ಷಣದಿ ॥ ೮ ॥

ಮೂರುಗುಣಂಗಳ ಮೂಲಪ್ರಕೃತಿಯಲ್ಲಿ ಸೇರಿಸಿ ಸರ್ವಜೀವರನು ।
ಕಾರಣಪುರುಷ ತನ್ನ ಕುಕ್ಷಿಯೊಳಿಟ್ಟು ಶ್ರೀರಮಣಿಗೆ ಸುಖವಿತ್ತ ॥ ೯ ॥

ಅತ್ತ ಮಹತ್ತತ್ವವಾಳ್ದ ದೇಹವಿರಲು ಚಿತ್ರಜೀವರ ಮೊತ್ತಗಳನು ।
ಹೊತ್ತಿಹ ಸತ್ಯಲೋಕದ ಬ್ರಹ್ಮ ವಿರಜೆಯ ತೀರ್ಥಸ್ನಾನಕೆ[ಸಲ್ವನಲ್ಲ] ॥ ೧೦ ॥

ಅದರಿಂದ ಇಪ್ಪತ್ತುಮೂರು ತತ್ತ್ವಂಗಳ ಅಧಿಪತಿಗಳ ಕೂಡಿಕೊಂಡು ।
ಮೊದಲ ತತ್ತ್ವ ತನ್ನ ಮೂಲರೂಪದಿ ಕೂಡಿ ಮದನನಯ್ಯಗೆ ತುತ್ತನಿತ್ತ ॥ ೧೧ ॥

ಹಿಂದೆ ಬ್ರಹ್ಮನ ಸೃಜಿಸಿ ಅವನಂಗವನಾಗಲೆ ತಿಂದರೆ ತುತ್ತು ಕುಂದುವುದು ।
ಎಂದುದಾಸೀನವ ಮಾಡಿದ ಶ್ರೀಕೃಷ್ಣ ಇಂದು ಭುಂಜಿಸಿ ತೇಗುತಿರ್ದ ॥ ೧೨ ॥

ಸಪ್ತದ್ವೀಪಗಳಲ್ಲಿ ಸುತ್ತಮುತ್ತಲಿಪ್ಪ ಭಕ್ತರಾಶಿಗೆ ಗಣನೆಯಿಲ್ಲ ।
ಅರ್ಥಿಯ ಭಕ್ಷಕ್ಕೆ ತಕ್ಕ ಧಾನ್ಯಂಗಳ ಮೊತ್ತ ಪರ್ವತದಂತಿತ್ತು ॥ ೧೩ ॥

ನಾನಾಫಲಂಗಳು ನಾನಾಪಕ್ವಾನ್ನಗಳು ನಾನಾವಿಧದ ಶಾಕಂಗಳು ।
ನಾನಾ ಕಂದಮೂಲಗಳು ಶ್ರೀಕೃಷ್ಣನ್ನ ಆನಂದಕ್ಕಂದೊದಗಿದವು ॥ ೧೪ ॥

**ಶ್ರುತಿ :** ಯಸ್ಯ ಬ್ರಹ್ಮ ಚ ಕ್ಷತ್ರಂ ಚೋಭೇ ಭವತ ಓದನಃ ।
ಮೃತ್ಯುರ್ಯಸ್ಯೋಪಸೇಚನಂ ಕ ಇತ್ಥಾವೇದ ಯತ್ರಸಃ ॥

ಹೆಡತಲೆಯ ಮೃತ್ಯುವೇ ಅಡಿಗಡಿಗೆ ತುಪ್ಪವಾಯಿತೊಡಲೊಂದೊಂದ್ ಎಂಬೋದೆ ।
ತುತ್ತುಗಳಾದುವು ಜಡತನವಿಲ್ಲದ ಜಗದೊಡೆಯನಿತ್ತು ಮಾರೆಡೆ
ಬಡಿಸಿದಂತೆ ಭುಂಜಿಸುವ ಗಡ ॥ ೧೫ ॥

ಮಧುಕೈಟಭರೆಂಬ ಕೊಬ್ಬಿದ ದಾನವರ ಮೈಯೊಳು ಹುದುಗಿಪ್ಪ ರೂಪರಸಗಂಧ ಭರಿತ ।
ವೇದದಿಂದ ಮಾಡಿದ ಈ ಮೇದಿನಿ ಶ್ರೀಧರಗೆ ಸ್ವಾದುವಾದ ಮಾಂಸವಾಯಿತು ॥ ೧೬ ॥

ಒಪ್ಪುವಂಗಗಳೊಳು ತೋರ್ಪ ಸುರರ ಹಿಂಡು ತಪ್ಪಿಸಿ ರಮೆಯೆಂತಪ್ಪುವಳೊ ।
ಕಪ್ಪುರದ ಕರಡಿಗೆಯಂತಿಪ್ಪ ಬಾಯೊಳು ತನ್ನಪ್ಪನಿರಲೆಂತು ಚುಂಬಿಪಳೊ ॥ ೨೯ ॥

ಅದರಿಂದ ತನ್ನ ಮೈಯೊಳಗಿದ್ದ ಜೀವರ ಉದರದಿ ಬಚ್ಚಿಡಲು ।
ಉದಧಿಕನ್ನಿಕೆ ತನ್ನ ರತಿಗನುವಾಗೆ ನೇಹದ ಬಗೆಗೆ ಮನದೊಳುಬ್ಬಿದಳು ॥ ೩೦ ॥

ತೆರತೆರದಿ ಮಿಂಚುವ ತಮ್ಮ ದೇಹಂಗಳ ಸಿರಿ ಪಸರಿಸೆ ಸಿರಿಧರನ ।
ಪುರಮೂರರೊಳಗಿರ್ದ ಪೂರ್ವಮುಕ್ತರು ಬಂದು ಹರಿಯುದರವ ಪೊಕ್ಕರಾಗ ॥ ೩೧ ॥

ಎಲ್ಲ ಜೀವರ ತನ್ನ ಪೊಟ್ಟೆಯೊಳಿಟ್ಟು ಸಿರಿಯೊಲ್ಲಭ ನಿದ್ರೆಗೊಳಿಸಿದ ।
ಸಲ್ಲೀಲೆಯಿಂದಲಿ ಸತಿಯೊಡನಾಡುವ ಉಲ್ಲಾಸಗಳ ಕಾಣದಂತೆ ॥ ೩೨ ॥

ಇಂತು ಮುಕ್ತಾಮುಕ್ತ ಜೀವರ ತಿಂತಿಣಿಯನಾಂತು ಶ್ರೀಕಾಂತ ಪವಡಿಸಿ ।
ಕಾಂತೆಯರೊಡನೆ ಸಂತೋಷದಲಿಹ ಕಥೆ ಸಂತತ ನಮ್ಮ ಸಲಹಲಿ ॥ ೩೩ ॥

**ಶ್ಲೋಕ :** ಶ್ರೀರೇವ ಲೋಕರೂಪೇಣ ವಿಷ್ಣೋಸ್ತಿಷ್ಠತಿ ಸರ್ವದಾ ।
ಅತೋ ಹಿ ವೈಷ್ಣವಾ ಲೋಕಾ ನಿತ್ಯಾಸ್ತೇಚೇತನಾ ಅಪಿ ॥

ಶ್ರೀದೇವಿ ತಾನೆ ತ್ರಿಧಾಮ ನಾಮಕಿಯಾಗಿ ಆದಿಅಂತ್ಯಗಳಿಲ್ಲದಂತೆ ।
ಬೋಧ ಸುಖರೂಪಳಾಗಿಹಳೆಂದು ಪೂರ್ವದಾ ವೇದವಾದಿಗಳೋದುತಿಹರು ॥ ೩೪ ॥

ಅದರಿಂದ ಹರಿಯ ಮೂಲೋಕಂಗಳಿಗೆ ಲಯದ ಕಿಚ್ಚಿಂದ ಕೇಡಿಲ್ಲ ।
ಮೊದಲೋದಕಗಳೆಲ್ಲ ಪೋದಕಾರಣ ಲಕುಮಿ ಉದಧಿಯಾದಳಚ್ಯುತಗೆ ॥ ೩೫ ॥

**ಶ್ಲೋಕ :** ಸಲಿಲಂ ಶ್ರೀ ಪ್ರಕೃತ್ಯಾಖ್ಯಂ ತದಾಸೀತ್ಕಿಲ ಕೇವಲಂ
ಅಂಭಸ್ಥ ಚೇತನಾನ್ಯೇತಿ ಶ್ರುತ್ಯರ್ಥಮುದದರ್ಶಯತ್ ।
ಯಥೈಕಾತ್ಮ್ಯಾನುಭಾವೇನ ವಿಕಲ್ಪರಹಿತಃ ಸ್ವಯಂ
ಭೂಷಣಾಯುಧ ಲಿಂಗಾದ್ಯಾ ಧತ್ತೇ ಶಕ್ತೀಃ ಸ್ವಮಯಯಂ ॥

ತತ್ವಗಳಿಗತಿದೂರವಾದ ದೇಶದಲಿ ಜಗತ್ತಿನ ಪ್ರಳಯಕಾಲದಲಿ ।
ಭರ್ತಗೆ ರಮೆ ತಾನೆ ಭೂಷಣಾಯುಧ ಅಂಗ ವಸ್ತ್ರಮಾಲೆಗಳಾಗಿಹಳು ಗಡ ॥ ೩೬ ॥

ಅಂಬುಧಿಯಾದಳೆ ಆಗ ಮಹಲಕುಮಿ ಅಂಬರಾಭರಣವಾಗಿಹಳು ।
ಪೊಂಬಣ್ಣದಾಲದೆಲೆಯು ತಾನಾದಳೇನೆಂಬೆನವಳ ಸಾಹಸವನು ॥ ೩೭ ॥

ಮಂದಾರ ಕುಸುಮದ ಮಾಲೆ ತಾನಾದಳು ಗಂಧಪರಿಮಳವಾಗಿಹಳು ।
ಮಂದಮಾರುತವಾಗಿ ಸುತ್ತಲೂ ಸುಳಿವಳು ಇಂದಿರೆಯಿರವನೇನೆಂಬೆ ॥ ೩೮ ॥

ಮುಖ ನೋಡೆ ಚಂದ್ರಮನ ಸೊಬಗ[ಮೀರಿದಳಾಗಿ] ಸುಖ ವಚನದಿ ಶುಕೋಕ್ತಿಗಳ ।
ಪಿಕನಂತೆ ಪಾಡುವಳು ಪ್ರಾಣನಾಯಕನಿಗೆ ಸಕಲಸಂಭ್ರಮ ತೋರಿದಳು ॥ ೩೯ ॥

ತುಂಬಿ ಸುಳಿವಂತೆ ಕಂಗಳನೋಟದಿಂದಂಬುಜಾಕ್ಷನಿಗರ್ತಿಯಿತ್ತು ।
ಬಿಂಬಾಧರದೊಳಿಪ್ಪ ಸುಧೆಯ ರಸವವನಿಗೆ ಚುಂಬಿಸಿಯುಣಿಸಿದಳಾ ಬಾಲೆ ॥ ೪೦ ॥

**ಶ್ಲೋಕ :** ಅಸಾವೇಕಾರ್ಣವೀ ಭೂತೇ ಮಾಯಾವಟದಳೇ ಪುಮಾನ್ ।
ಜಗತ್ಸ್ವಜಠರೇ ಬಿಭ್ರತ್ತಸ್ಮಿನ್ ಶೇತೇ ಜನಾರ್ದನಃ ॥

ಭೂ ಲಕ್ಷ್ಮೀ ದುರ್ಗೇ[ರು]ಲಾಲಿಸುತಿರೆ ಹರಿ ಆಲದೆಲೆಯಮೇಲೆ ಮಲಗಿ ।
ಆ ಲಯಾಂಬುಧಿಯ ಕಲ್ಲೋಲ ಉದಕದಲ್ಲುಯ್ಯಾಲೆಯಾಡಿದನಾಗ ಲೀಲೆಯಲಿ ॥ ೪೧ ॥

ಒಮ್ಮೆ ಭೂಮಿಯಹಳೊಮ್ಮೆ ದುರ್ಗಿಯಹಳೊಮ್ಮೆ ಶ್ರೀದೇವಿಯಾಗಿಹಳು ।
ಇಮ್ಮೈಯಲೊಮ್ಮೆ ಪತಿಯಪ್ಪಲು ಸುಖಿಪ ಚಿನ್ಮಯಳರ್ತಿಯನೇನೆಂಬೆ ॥ ೪೨ ॥

ಇವಳಪ್ಪಿಕೊಂಬಾಗ ಹರಿಯ ವಕ್ಷದ ಗಂಧ ಅವಳುರದಲ್ಲಿ ತೋರುತಿಹುದು ।
ಅವಳ ಚುಂಬಿಸಿದಾಗ ಪತಿಯ ದಂತದ ಗಾಯ ಇವಳಧರದಲೊಪ್ಪುತಿಹುದು ॥ ೪೩ ॥

ಅಚ್ಯುತನುದರದಿ ಲಿಂಗದೇಹದ ಕಣ್ಣಮುಚ್ಚಿ ಜೀವರು ನಿದ್ರೆಗೈಯೆ ।
ಎಚ್ಚತ್ತಿಹನು ಗಡ ಮುಖ್ಯಪ್ರಾಣನು ಒಬ್ಬ ಸ್ವಚ್ಛಚಿತ್ತ ಮುಕ್ತರೊಳಗೆ ॥ ೪೪ ॥

ಪ್ರಳಯೇಪಿ ಅವಿಲುಪ್ತ ಬಾಹ್ಯಜ್ಞವೆಂದಖಿಳರೊಳು ಮುಖ್ಯ ಮಾರುತನ ।
ನೆಲೆಯರಿತು ವಾಯುರ್ವಾವ ನಿತ್ಯ ಎಂಬ ನಿರ್ಮಳ ಶ್ರುತಿ ಗರ್ಜಿಸುತ್ತಿದಕೊ ॥ ೪೫ ॥

ದೇಹಿ ನಿದ್ರಿತನಾಗೆ ಅವನ ದೇಹದೊಳಿಹ ಜೀವರು ನಿದ್ರೆಯ ಬಡರು ।
ಹೋಹ ಬಾಹ ಶ್ವಾಸಂಗಳಾಗ ನಡೆಸುವನೀಹದ ಲಯದ ಕಾಲದಲಿ ॥ ೪೬ ॥

